ಬೆಂಗಳೂರು ಬೆಳಗಾವಿ ಶಿವಮೊಗ್ಗ ಮಂಗಳೂರು ಹುಬ್ಬಳ್ಳಿ ಗುಲ್ಬರ್ಗ ಬೆಂಗಳೂರು 27 ಫೆಬ್ರವರಿ 2014 ಗುರುವಾರ 20 ಪುಟ ₹3-50

ಕನ್ನಡಪ್ರಭ

kannadaprabha.com /kannadaprabhaonline @kprabhadaily

LIBRARY

**ಸುಪ್ರಭಾತ**

ನಿಮ್ಮ ಜೀವನದ ಅಧ್ಯಾಯ 1 ಅನ್ನು ಇನ್ನೊಬ್ಬರ ಜೀವನದ ಅಧ್ಯಾಯ 20ಕ್ಕೆ ಹೋಲಿಕೆ ಮಾಡಿಕೊಳ್ಳಬೇಡಿ. ಏಕೆಂದರೆ ಅವರೂ ಕೂಡ ಅಧ್ಯಾಯ 1ರಲ್ಲಿ ನಿಮ್ಮಂತೆಯೇ ಇರುತ್ತಾರೆ. ಅಧ್ಯಾಯ 20ಕ್ಕೆ ಬರುವ ಹೊತ್ತಿಗೆ ಯಶಸ್ಸು ಕಂಡಿರುತ್ತಾರೆ ಎಂಬುದು ನೆನಪಿರಲಿ.

# ಶ್ರೀಗಂಧ ಸೇರಿ ಅರಣ್ಯ ರಕ್ಷಣೆ ಇಂದಿನ ಅಗತ್ಯ: ಭಾರದ್ವಾಜ್

- ಅರಣ್ಯ ಸಂರಕ್ಷಣೆಗೆ ಮುಂದಾಗದಿದ್ದರೆ ಉತ್ತರಾಖಂಡದಲ್ಲಾದಂಥ ಪರಿಸರ ಸಂಬಂಧಿ ಸಮಸ್ಯೆ
- ರಾಜ್ಯದಲ್ಲಿ ಶ್ರೀಗಂಧ ಅರಸರ ಕಾಲದಿಂದಲೂ ಮಹತ್ವ ಪಡೆದಿದ್ದು, ವಿಶ್ವಖ್ಯಾತಿ ತಂದುಕೊಟ್ಟಿದೆ: ಮೊಯ್ಲಿ

ಬೆಂಗಳೂರು: ಶ್ರೀಗಂಧ ಸೇರಿದಂತೆ ಎಲ್ಲಾ ರೀತಿಯ ಅರಣ್ಯವನ್ನು ರಕ್ಷಿಸಿಕೊಳ್ಳಬೇಕಿದೆ. ಇಲ್ಲವಾದಲ್ಲಿ ಉತ್ತರಾಖಂಡದಲ್ಲಾದಂತಹ ಪರಿಸರ ಸಂಬಂಧಿ ಸಮಸ್ಯೆಗಳು ತಲೆದೋರಬಹುದು ಎಂದು ರಾಜ್ಯಪಾಲ ಎಚ್.ಆರ್. ಭಾರದ್ವಾಜ್ ಎಚ್ಚರಿಸಿದ್ದಾರೆ.

ಮರ ವಿಜ್ಞಾನ, ತಂತ್ರಜ್ಞಾನ ಸಂಸ್ಥೆ ವತಿಯಿಂದ ಭಾರತೀಯ ವಿಜ್ಞಾನ ಸಂಸ್ಥೆಯಲ್ಲಿ ಬುಧವಾರ ನಡೆದ ಶ್ರೀಗಂಧದ ಈಗಿನ ಸ್ಥಿತಿ ಮತ್ತು ಮುಂದಿನ ಭವಿಷ್ಯ ಕುರಿತ ಅಂತಾರಾಷ್ಟ್ರೀಯ ವಿಚಾರ ಸಂಕಿರಣದಲ್ಲಿ ಅವರು ಮಾತನಾಡಿದರು.

ಇತ್ತೀಚೆಗೆ ಎಲ್ಲಾ ಸಭೆ, ಸಮಾರಂಭಗಳಲ್ಲೂ ಶ್ರೀಗಂಧದ ಮಾಲೆ ಬಳಸಲಾಗುತ್ತದೆ. ನಿಜಕ್ಕೂ ಇದು ಗಂಧದ ಮಾಲೆ ಆಗಿದ್ದರೆ ಶ್ರೀಗಂಧಕ್ಕೆ ಉತ್ತಮ ರೀತಿಯ ಉತ್ತೇಜನ ಇದೆ ಎನ್ನಬಹುದಿತ್ತು. ಆದರೆ ಈಗ ಶ್ರೀಗಂಧದ ನಕಲಿ ಮಾಲೆಗಳು ಎಂದರು.

ಇತ್ತೀಚೆಗೆ ಹೆಚ್ಚು ಬಳಕೆಯಾಗುತ್ತಿರುವ ಈ ಮಾಲೆಗಳು ನೋಡಲು ಶ್ರೀಗಂಧದ ಮಾಲೆಯಂತೆ ಕಂಡರೂ ಸುವಾಸನೆ ಮಾತ್ರ ಇಲ್ಲ. ಸಾಮಾನ್ಯ ಒಂದು ಶ್ರೀಗಂಧ ಮಾಲೆಗೆ ₹3000ವರೆಗೂ ವೆಚ್ಚ ಆಗುತ್ತದೆ. ಆದರೆ ನನಗೆ ಶುಭ ಹಾರೈಸಲು ಬರುವ ಅನೇಕ ಮಂದಿ ತರುವ ಮಾಲೆಗಳು ನಕಲಿ. ಅಂದರೆ ಕೇವಲ ₹100ಕ್ಕೆ ಸಿಗುವ ನಕಲಿ ಮಾಲೆಗಳು. ಇಂಥ ಒಂದು ಟನ್ ಮಾಲೆಗಳು ನನ್ನ ಕಚೇರಿಯಲ್ಲಿವೆ ಎಂದು ಹೇಳಿದರು.



ವಿಚಾರ ಸಂಕಿರಣದಲ್ಲಿ ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವ ಎಂ.ವೀರಪ್ಪ ಮೊಯ್ಲಿ ಶ್ರೀಗಂಧದ ಭವಿಷ್ಯ ಎಂಬ ಕೃತಿ ಬಿಡುಗಡೆಗೊಳಿಸಿದರು. ರಾಜ್ಯಪಾಲ ಎಚ್.ಆರ್. ಭಾರದ್ವಾಜ್, ಡಾ.ಎಸ್.ಎಸ್.ಗಾರ್ಬೇಲ್, ಡಾ.ವಿ.ರಮಾಕಾಂತ್ ಹಾಜರಿದ್ದರು.

**ಸರ್ಕಾರಿ ಕಚೇರಿಗಳಲ್ಲಿಡಿ:** ನಾಡಿನ ಹಿರಿಮೆಯ ಪ್ರತೀಕವಾದ ಶ್ರೀಗಂಧದ ಕರಕುಶಲ ವಸ್ತುಗಳನ್ನು ರಾಜ್ಯದ ಎಲ್ಲಾ ಸಚಿವರ ಕಚೇರಿ, ನಿವಾಸ ಹಾಗೂ ಎಲ್ಲಾ ಸರ್ಕಾರಿ ಕಚೇರಿಗಳಲ್ಲೂ ಇರಿಸಬೇಕು ಎಂದು ಕೇಂದ್ರ ಪರಿಸರ ಮತ್ತು ಅರಣ್ಯ ಸಚಿವ ಎಂ.ವೀರಪ್ಪ ಮೊಯ್ಲಿ ಹೇಳಿದ್ದಾರೆ.

ರಾಜ್ಯದ ಶ್ರೀಗಂಧ ಅರಸರ ಕಾಲದಿಂದಲೂ ಮಹತ್ವ ಪಡೆದಿದ್ದು, ವಿಶ್ವಖ್ಯಾತಿ ತಂದುಕೊಟ್ಟಿದೆ. ಕನ್ನಡ ನಾಡು ಗಂಧದ ಬೀಡು, ಚಂದದ ನಾಡು ಎಂದು ಹಿರಿಮೆ ಗಳಿಸಲು ಶ್ರೀಗಂಧವೇ ಕಾರಣ. ಇದನ್ನು ಉಳಿಸಿ, ಬೆಳೆಸಲು ಇಂದು ಶ್ರೀಗಂಧ ಹಾಗೂ ಅದರ ಉತ್ಪನ್ನಗಳನ್ನು ಸಂರಕ್ಷಿಸಬೇಕು. ಶ್ರೀಗಂಧದ ಕರಕುಶಲ ವಸ್ತುಗಳ ಬಳಕೆ ಹೆಚ್ಚಾಗಬೇಕು. ಇಂಥ ವಸ್ತುಗಳನ್ನು ಎಲ್ಲಾ ಸರ್ಕಾರಿ ಕಚೇರಿಗಳಲ್ಲೂ ಇರಿಸುವಂತೆ ಎಲ್ಲರಿಗೂ ಸೂಚನೆ ನೀಡುವಂತೆ ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ಪತ್ರ ಬರೆಯುವುದಾಗಿ ಅವರು ವಿವರಿಸಿದರು.

ಶ್ರೀಗಂಧಕ್ಕೆ ಟಿಪ್ಪು ಸುಲ್ತಾನ್ ಕಾಲದಲ್ಲಿ ಹೆಚ್ಚು ಆದ್ಯತೆ ಸಿಕ್ಕಿತ್ತು. ಅಗಿನಿಂದಲೂ ಕನ್ನಡ ನಾಡು ಶ್ರೀಗಂಧದ ಬೀಡಾಗಿದೆ. ಇದನ್ನು ಡಾ. ರಾಜ್‌ಕುಮಾರ್ ಗಂಧದಗುಡಿ ಎಂಬ ಸಿನಿಮಾವನ್ನೇ ಮಾಡಿ ಅದರಲ್ಲಿ ನಾಡಿನ ಗಂಧದ ಹಿರಿಮೆ, ಗರಿಮೆಯನ್ನು ಸಾರಿದ್ದಾರೆ. ಇದನ್ನು ಉಳಿಸಿ, ಬೆಳೆಸುವ ಮೂಲಕ ಮರ ವಿಜ್ಞಾನ, ತಂತ್ರಜ್ಞಾನ ಸಂಸ್ಥೆ ದೇಶಕ್ಕೇ ಕೀರ್ತಿ ತರುತ್ತಿದೆ ಎಂದು ಮೊಯ್ಲಿ ಹೇಳಿದರು.

ಇದೇವೇಳೆ ಹಿರಿಯ ಸಂಶೋಧಕಿ, ಪರಿಸರ ತಜ್ಞೆ ಆರ್.ಎ.ಶ್ರೀಮತಿ ಅವರನ್ನು ಗೌರವಿಸಲಾಯಿತು. 83ರ ಇಳಿವಯಸ್ಸಿನಲ್ಲೂ ಅವರು ಶ್ರೀಗಂಧದ ಅಭಿವೃದ್ಧಿ ಬಗ್ಗೆ ಸಂಶೋಧನೆ ನಡೆಸುತ್ತಿದ್ದು, ಸುಮಾರು 100ಕ್ಕೂ ಹೆಚ್ಚು ಪ್ರಬಂಧಗಳನ್ನು ಮಂಡಿಸಿದ್ದಾರೆ ಎಂದು ರಾಜ್ಯಪಾಲರು ಶ್ಲಾಘಿಸಿದರು.